ಶ್ರೀ ಟಿ. ಪಿ. ಬೋರಯ್ಯ.--ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡಬೇಕಾಗಿದೆ ರೆ ಸರ್ಕಾರದವರು ಯಾವುದಾದರೂ ಯೋಜನ ಇಟ್ಟುಕೊಂಡಿದ್ದಾರೆಯೇ ? ಇದ್ದರೆ ಆದರ ವಿವರನನ್ನು ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡುವಾಗ ಇರತಕ್ಕ ಯೋಜನೆ ಇಷ್ಟೆ : ಅಲ್ಲಿನ ಆಡಳಿತಕ್ಕೆ ಒಳಪಟ್ಟ ಸ್ಥಳಗಳಲ್ಲಿ ಯಾವ ಯಾವ ಸಹಕಾರ ಸಂಘಗಳು ರಿಜಿಸ್ಟರ್ ಆಗಿವೆ ಮತ್ತು ಯಾವ ಯಾವ ತರಹದ ಸಹಕಾರ ಸಂಘಗಳು ರಿಜಿಸ್ಟರ್ ಆಗಿವೆ ಹಾಗೂ ಅವುಗಳು ಏನೇನು ಅನುಕೂಲಗಳನ್ನು ಒದಗಿಸುತ್ತಿವೆ ಎಂಬ ವಿವರಗಳನ್ನು ನೋಡತಕ್ಕದ್ದು. ಇದನ್ನು ಬಿಟ್ಟು ಬೇರೆ ಯಾವ ಯೋಜನೆಯೂ ಇರುವುದಿಲ್ಲ.

ಶ್ರೀ ಎಂ. ಮಹದೇವ್ --ರೆ ತ ಸೇವಾ ಸಹಕಾರ ಸಂಘದಲ್ಲಿ ಎಲ್ಲ ಸೌಕರ್ಯಗಳು ಇದ್ದರೂ ಕಬ್ಬು ಬೆಳೆಗಾರರಿಗೆ ಪ್ರತ್ಯೇಕವಾಗಿ ಕಬ್ಬು ಬೆಳೆಗಾರರ ಸಹಕಾರ ಸಂಘ ಎಂದು ರಿಜಿಸ್ಟರ್ ಮಾಡುವ ಅವಶ್ಯಕತೆ ಏನು ?

ಉಪಾಧ್ಯಕ್ಷರು.--ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ.--ಕಾನೂನು ಪ್ರಕಾರ ಮಾಡಿಕೊಳ್ಳುವುದಕ್ಕೆ ಏನು ಅಡ್ಡಿ ಇಲ್ಲ. ಅದು ಹಿಂದೆ ಮಾಡಿರತಕ್ಕ ಸೊಸೈಟಿ ಇರಬಹುದು ; ಈಗಲೂ ಮಾಡಬಹುದು. ಆಕ್ಟ್ ಪ್ರಕಾರ ಮಾಡಬೇಕೆಂದರೆ ಮಾಡುತ್ತೇವೆ.

ಶ್ರೀ ಎಂ. ಮಹದೇವ.--ಕಬ್ಬು ಬೆಳೆಗಾರರ ಸಂಘ ಯಾವ ವರ್ಗಕ್ಕೆ ಬರುತ್ತದೆ ?

ಉಪಾಧ್ಯಕ್ಷರು.--ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಬಹಳ ಗಲಾಟೆ ಮಾಡಬೇಡಿ ಕುಳಿತುಕೊಳ್ಳಿ.

ಬೀದರ್ ಜಿಲ್ಲೆಯ ಲಂಬಾಣಿ ತಾಂಡಗಳಿಗೆ ವಿದ್ಯುತ್ ಸರಬರಾಜು

148 ಶ್ರೀ ಬಸವರಾಜ ಪಾಟೀಲ್ (ಹನುನಾಬಾದ್).--ಮಾನ್ಯ ವಿದುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :--

ಅ) ಬೀದರ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳೆಷ್ಟು :

ಆ) ಎಷ್ಟು ತಾಂಡಗಳಿಗೆ ವಿದ್ಯುತ್ ಪೂರೈಕೆಯಾಗಿದೆ :

ಇ) ವಿದ್ಯುತ್ ಪೂರೈಕೆ ಇಲ್ಲದಿರುವ ತಾಂಡಗಳಿಗೆ ಪೂರೈಸಲು ಏನಾದರೂ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಅ) ಈ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆಗಳನ್ನು ಸಂಗ್ರಹಿಸಲಾಗುತ್ತಿದೆ ;

ಆ) ಬೀದರ ಜಿಲ್ಲೆಯಲ್ಲಿ 34 ತಾಂಡ ಮತ್ತು ವಾಡಿಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಇ) ವಿದ್ಯುತ್ ಒದಗಿಸಲು ಸದ್ಯದಲ್ಲಿ ಯಾವ ಕ್ರಮವನ್ನು ಕೈಗೊಂಡಿಲ್ಲ. ಆದರೆ ಮಂಡಳಿಯ ವಿದ್ಯುದ್ದೀಕರಣ ಯೋಜನೆಯ ನಿಯಮ ನಿಭಂಧನೆಗೆ ಒಳಪಟ್ಟದ್ದು ಇರುವ ತಾಂಡಗಳಿಗೆ ವಿದ್ಯುತ್ ಒದಗಿಸಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಜೆ. ಹೆಚ್. ಪಟೇಲ್--ಒಟ್ಟು ಬೀದರ್ ಜಿಲ್ಲೆಯಲ್ಲಿರತಕ್ಕ 591 ಗ್ರಾಮಗಳ ಪೈಕಿ 144 ಲಂಬಾಣಿ ತಾಂಡಗಳಿವೆ. 144 ರ ಪೈಕಿ 34 ತಾಂಡಗಳಿಗೆ ಈಗಾಗಲೇ ವಿದ್ಯುತ್ ಪೂರೈಕೆ ಆಗಿದೆ. ಇನ್ನೂ 110 ತಾಂಡಗಳಿಗೆ ಆಗಬೇಕಾಗಿದೆ. ಈ 110 ತಾಂಡಗಳನ್ನು ಕರ್ನಾಟಕ ವಿದ್ಯುತ್ ಮಂಡಲಿ ಯೋಜನೆ ಮತ್ತು ರಾಷ್ಟ್ರೀಯ ವಿದ್ಯುದೀಕರಣ ನಿಗಮ ಯೋಜನೆಯಲ್ಲಿ ಅಳವಡಿಸುವುದಕ್ಕೆ ಕ್ರಮ ತೆಗೆದುಕೊಂಡಿದೆ. ಬರುವ 3 ಅಥವಾ 4 ವರ್ಷಗಳಲ್ಲಿ ಸಂಪೂರ್ಣವಾಗಿ ಎಲ್ಲ ತಾಂಡಗಳಿಗೂ ವಿದ್ಯುತ್ತನ್ನು ಪೂರೈಸುತ್ತೇವೆ.

ಶ್ರೀ ಬಿ ಎಸ್. ಯಡಿಯೂರಪ್ಪ--ವರ್ಷಕ್ಕೆ ಹತ್ತರಂತೆ ಆದರೆ 110 ತಾಂಡಗಳಿಗೆ ವಿದ್ಯುತ್ ಪೂರೈಸುವುದು ಯಾವಾಗ ? ಅಂದಾಗ 11 ವರ್ಷ ಕಾಯಬೇಕಾಗುತ್ತದೆ !

ಉಪಾಧ್ಯಕ್ಷರು-- ಪ್ರಶ್ನೆ ಕೇಳಿರುವುದು ಪಾಟೀಲರು. ಇದು ಬೀದರ್ ಜಿಲ್ಲೆಗೆ ಸಂಬಂಧಿಸಿದ್ದು. ಆದ್ದರಿಂದ, ನೀವು ದಯವಿಟ್ಟು ಸಲಹೆ ಮಾಡಬೇಕು.

ಶ್ರೀ ಬಸವರಾಜ ಪಾಟೀಲ್--ಈಗ ಮುಖ್ಯಮಂತ್ರಿಯವರು ಉತ್ತರಿಸಿದ್ದು ಸರಿ ಇದೆ. ಆದರೆ ನನಗೆ ಕೊಟ್ಟರತಕ್ಕ ಉತ್ತರಕ್ಕೂ ಮತ್ತು ಅವರು ಈಗ ನೀಡಿದ ಉತ್ತರಕ್ಕೂ ಬಹಳ ವ್ಯತ್ಯಾಸ ಇದೆ. ನನಗೆ ಕೊಟ್ಟರತಕ್ಕ ಉತ್ತರದಲ್ಲಿ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಈಗ 144 ಲಂಬಾಣಿಗಳ ತಾಂಡಗಳಿವೆ ಎಂದ

ಹೇಳಿದರು. ಹೀಗೆ ಆಜೊಂದು, ಇಜೊಂದು ಆದರೆ ಉಪ ಪ್ರಶ್ನೆ ಕೇಳುವುದಕ್ಕೆ ತೊಂದರೆಯಾಗುತ್ತದೆ. ಮುಂದೆ ಈ ರೀತಿ ಆಗುವುದನ್ನು ತಪ್ಪಿಸಬೇಕು ಇವತ್ತು ಲಂಬಾಣಿ ಜನ ಹಾವು ಕಚ್ಚಿ ಸಾಯುತ್ತಿದ್ದಾರೆ ಇದರಲ್ಲಿ.

ಶ್ರೀ ಜೆ. ಹೆಚ್. ಪಟೀಲ್--ಹಾವು ಕಚ್ಚಿದರೆ ಲಂಬಾಣಿಯವರು ಮಾತ್ರವಲ್ಲ ಎಲ್ಲರೂ ಸಾಯುತ್ತಾರೆ. ಯಾವುದೇ ಗ್ರಾಮವನ್ನ ವಿದ್ಯುದೀಕರಣದ ಯೋಜನೆಯಲ್ಲಿ ತರಬೇಕಾದರೆ ಎರಡು ಯೋಜನೆಗಳಿವೆ ಎಂದು ಆಗಲೇ ಹೇಳಿದ್ದೇನೆ. ಒಂದು ಕರ್ನಾಟಕ ವಿದ್ಯುತ್ ಮಂಡಲಿ ಯೋಜನೆ, ಇನ್ನೊಂದು ರಾಷ್ಟ್ರೀಯ ವಿದ್ಯುದೀಕರಣ ನಿಗಮದ ಯೋಜನೆ. ಖರ್ಚು ಮಾಡಿರತಕ್ಕ ಹಣದ ಶೇಕಡ 7½ಯಷ್ಟು ಹಣ ವಾಪಸ್ಸು ಬರತಕ್ಕ ಅವಕಾಶ ಇದ್ದ ಕಡೆ ಆ ಗ್ರಾಮಗಳನ್ನು ವಿದ್ಯುದೀಕರಣದ ಯೋಜನೆಯಲ್ಲಿ ಅಳವಡಿಸುತ್ತೇವೆ; ಅದು ಬಯಲು ಸೀಮೆಯಾದರೆ, ಮಲೆನಾಡಾದರೆ 5 ಪರ್ಸೆಂಟ್ ವಾಪಸ್ಸು ಬರಬೇಕು. ರಾಷ್ಟ್ರೀಯ ವಿದ್ಯುದೀಕರಣ ನಿಗಮ ಏನಿದೆ ಅದಕ್ಕೆ ಕಾನೂನನ್ನು ಬಿಗಿ ಮಾಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವಶ್ಯಕತೆಯ ಆಧಾರದ ಮೇಲೆ ಲಂಬಾಣಿ ತಾಂಡಗಳು ಮತ್ತು ಹರಿಜನ ಕೇರಿಗಳಿರುವ ಕಡೆ ನಮ್ಮ ನಿಯಮಗಳು ಅಡ್ಡಿ ಬಂದರೆ ಚಿಂತೆ ಇಲ್ಲವೆಂದು ನಿಯಮವನ್ನು ನೊಟಿಕುಗೊಳಿಸಿ ಅವುಗಳನ್ನು ವಿದ್ಯುದೀಕರಣ ಯೋಜನೆಗೆ ತಳವಡಿಸುತ್ತಿದ್ದೇವೆ. ಯಡಿಯೂರಪ್ಪನವರು ವ್ಯಕ್ತಪಡಿಸಿದ ಸಂಶಯ ಏನಿದೆ ಅದಕ್ಕೆ ಹೇಳುವುದಾದರೆ, ನಾವು ಸಾಮಾನ್ಯವಾಗಿ ಬಂದು ವರ್ಷಕ್ಕೆ ಬಂದು ತಾಲ್ಲೂಕಿನಲ್ಲಿ 6-7 ಗ್ರಾಮಗಳನ್ನು ಈ ಯೋಜನೆಗೆ ಅಳವಡಿಸಿಕೊಳ್ಳುವುದು ಸರ್ವೇಸಾಮಾನ್ಯವಾದ ವೇಗ ಆದರೆ ರಾಷ್ಟ್ರೀಯ ವಿದ್ಯುದ್ದೀಕರಣ ನಿಗಮ ಏನಿದೆ ಅದರ ಮೂಲಕ ಸಹ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಲಂಬಾಣಿ ತಾಂಡಗಳು ಮತ್ತು ಹರಿಜನ ಕೇರಿಗಳಿಗೆ ವಿಶೇಷ ಸವಲತ್ತುಕೊಟ್ಟು ಅವುಗಳನ್ನು ವಿದ್ಯುದೀಕರಣ ಜಾಲದ ಒಳಗೆ ತರಬೇಕೆಂದು ತೀರ್ಮಾನಿಸಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ--ಸಾಮಾನ್ಯವಾಗಿ ಬೀದರ್ ಜಿಲ್ಲೆಯಲ್ಲಿರತಕ್ಕ 90 ಪರ್ಸೆಂಟ್ ಜನರಿಗೆ ವಿದ್ಯುತ್ ಸೌಲಭ್ಯ ದೊರೆತಿದೆ. 144 ಲಂಬಾಣಿ ತಂಡದ ಪೈಕಿ 34ನ್ನು ಮಾತ್ರ ವಿದ್ಯುದೀಕರಣ ಮಾಡಿದ್ದೀರಿ. ಸರ್ಕಾರಿ ಫಾಲಿಸಿ ಪ್ರಕಾರ ಎಲ್ಲೆಲ್ಲಿ ಹರಿಜನರು, ಲಂಬಾಣಿಗರು ಇರುತ್ತಾರೆ ಅವರಿಗೆ ಮೊದಲ್ಗೊಡಬೇಕೆಂದಿದ್ದರೂ ಕೂಡ ಕೊಟ್ಟಿಲ್ಲ ಈಗಲಾದರೂ ಎಲ್ಲ ಲಂಬಾಣಿ ತಾಂಡಗಳಿಗೆ ಒಂದು ವರ್ಷದೊಳಗೆ ವಿದ್ಯುತ್ತನ್ನು ಒದಗಿಸುತ್ತೀರಿ ?

ಒಬ್ಬ ಮಾನ್ಯ ಸದಸ್ಯರು-- ಈ ಒಂದು ಯೋಜನೆ ಬೀದರ್ ಜಿಲ್ಲೆಗೆ ಮಾತ್ರ ಸೀಮಿತವೋ ಅಥವಾ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುತ್ತದೋ? ಕೆಲವು ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಿ ಕೆಲವಕ್ಕೆ ಕಲ್ಪಿಸದೆ ಮುಂದಿನ ಗ್ರಾಮಗಳಿಗೆ ಕಲ್ಪಿಸಿದ್ದೀರಿ. ಇವತ್ತಿನ ದಿನಸ ರಾಜ್ಯದಲ್ಲಿ ಎಲ್ಲಾ ಕಡೆ ಲಂಬಾಣಿ ತಾಂಡಗಳಿವೆ ಆದ್ದರಿಂದ, ರಾಜ್ಯದಲ್ಲಿ ಎಲ್ಲೆಲ್ಲಿ ಲಂಬಾಣಿ ತಾಂಡಗಳಿವೆ ಅಲ್ಲೆಲ್ಲಲ್ಲ ಒಂದು ವಿಶೇಷ ಯೋಜನೆ ಹಾಕಿಕೊಂಡು ಕರ್ನಾಟಕದಲ್ಲಿರುವ ಎಲ್ಲ ಲಂಬಾಣಿ ತಾಂಡಗಳಿಗೂ ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡುತ್ತೀರಾ ?

ಉಪಾಧ್ಯಕ್ಷರ--ಇದು ಬೀದರ್ ಜಿಲ್ಲೆಗೆ ಮಾತ್ರ ಸಂಬಂಧಪಟ್ಟದ್ದು

ಶ್ರೀ ಸಿ. ಬೈರೇಗೌಡ-- ಮಾನ್ಯ ಮಂತ್ರಿಗಳಿಗೆ ಲಂಬಾಣಿಗರ ಮೇಲೆ ಹೆಚ್ಚಿನ ಒಲವು ಇದೆಯೆಂದು ಆಂದುಕೊಂಡಿದ್ದೇನೆ. ಎಲ್ಲ ಲಂಬಾಣಿ ತಾಂಡಗಳಿಗೆ ವಿದ್ಯುತ್ ಪೂರೈಸುವ ಯೋಜನೆ ಇದೆಯೆ?

ಶ್ರೀ ಸುಬ್ಬಿಕಾರ್ಜುನ ಖರ್ಗೆ-- ಮಂತ್ರಿಗಳಿಂದ ಸರಿಯಾದ ಉತ್ತರವೇ ಬರಲಿಲ್ಲ. ಎಲ್ಲ ಲಂಬಾಣಿ ತಾಂಡಗಳಿಗೆ ವಿದ್ಯುತ್ ಪೂರೈಸುತ್ತೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ತಾಂಡಗಳು ಎಷ್ಟಿವೆ ಎಂಬ ಮಾಹಿತಿ ಸಂಗ್ರಹಿಸುತ್ತಿದ್ದೇನೆಂದು ಹೇಳಿದ್ದೀರಿ. ಇಡೀ ಬೀದರ್ ಜಿಲ್ಲೆಯಲ್ಲಿ ಎಷ್ಟು ತಾಂಡಗಳಿವೆ? ಎಷ್ಟು ತಾಂಡಗಳಿಗೆ ವಿದ್ಯುತ್ ಪೂರೈಸಿದ್ದೀರಿ? ಇನ್ನು ಎಷ್ಟಕ್ಕೆ ಕೊಡಬೇಕಾಗಿದೆ ? ಆದೇ ರೀತಿ ಎಲ್ಲ ಹರಿಜನ ತಾಂಡಗಳಿಗೂ ವಿದ್ಯುತ್ ಒದಗಿಸತಕ್ಕ ಯೋಜನೆ ಮಾಡುತ್ತೀರಾ ? ಹರಿಜನರಾಗಲೀ ಅಥವಾ ಹಿಂದುಳಿದ ವರ್ಗದವರಾಗಲೀ ಎಲ್ಲರನ್ನೂ ಬಂದೇ ರೀತಿ ಭಾವಿಸಬೇಕು. ಒಂದು ಸಮಗ್ರವಾದ ಯೋಜನೆ ಹಾಕಿಕೊಂಡು 5-6 ವರ್ಷಗಳಲ್ಲಿ ಎಲ್ಲ ಕಡೆಗೂ ಸಂಪೂರ್ಣವಾಗಿ ವಿದ್ಯುತ್ ಪೂರೈಕೆ ಮಾಡುವ ಭರವಸೆ ಕೊಡುತ್ತೀರಾ?

ಶ್ರೀ ಎಚ್. ಡಿ. ಚೌಡಯ್ಯ.--ಲಂಬಾಣಿ ತಾಂಡ, ಹರಿಜನ ಕಾಲೋನಿಗಳಿಗೆ ವಿಶೇಷ ಯೋಜನೆ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಜನತಾ ಹೌಸಿಂಗ್ ಕಾಲೋನಿಗಳಿಗೂ ಈ ಸೌಲಭ್ಯವನ್ನು ವಿಸ್ತರಿಸುವ ವ್ಯವಕ್ತಾಗುತ್ತದೆಯೇ ? ಏಕೆಂದರೆ ಜನತಾ ಹೌಸಿಂಗ್ ಕಾಲೋನಿಗಳಲ್ಲಿ ಹಾವಿನ ಕಾಟ, ಕಳ್ಳರ ಕಾಟ ಜಾಸ್ತಿ

ಇದೆ. ಆದ್ದರಿಂದ ಲಂಬಾಣಿ ತಾಂಡ ಮತ್ತು ಹರಿಜನ ಕಾಲೊನಿಗೆ ಹಾಕಿಕೊಂಡಿರುವ ವಿಶೇಷ ಯೋಜನೆಯಲ್ಲಿ ಜನತಾ ಹೌಸಿಂಗ್ ಕಾಲೊನಿಗಳನ್ನೂ ಸೇರಿಸಿಕೊಳ್ಳುತ್ತಾರೆಯೇ ?

ಶ್ರೀ ಜೆ. ಎಚ್. ಪಟೇಲ್.--ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಬೀದರ್ ಜಿಲ್ಲೆಯಲ್ಲಿ 144 ತಾಂಡಗಳು ಬೀದರ್ ಜಿಲ್ಲೆಯಲ್ಲಿವೆ ಎಂದು ಹೇಳಿದ್ದೇನೆ. ಅದರಲ್ಲಿ 34ಕ್ಕೆ ವಿದ್ಯುತ್ತೀಕರಣ ಆಗಿತ್ತು. ಇನ್ನು 110 ತಾಂಡಗಳಿಗೆ ಆಗಬೇಕಾಗಿದೆ. ಇದರಲ್ಲೀನ್ನೂ ಆಸ್ಪಷ್ಟತೆ ಇಲ್ಲ ವಿದ್ಯುತ್ತೀಕರಣಕ್ಕೆ ಬೇಕಾಗಿರತಕ್ಕ ಕೆಲವು ಸಲಕರಣೆಗಳ ಅಭಾವದಿಂದ ಆನಿವಾರ್ಯ ಕಾರಣಗಳಿಂದ ಕೆಲವು ಕಡೆ ಈ ಕೆಲಸ ತಡವಾಗಿದೆ ಇನ್ನು ಕೆಲವು ಕಡೆ ಅನಾವಶ್ಯಕವಾಗಿ ಕಾನೂನಿನ ತೊಡಕಿನಿಂದಲೂ ತೊಂದರೆಯಾಗಿದೆ. ಯಾವುದೇ ಒಂದು ಗ್ರಾಮ ಒಂದೂವರೆ ಕಿಲೋಮೀಟರ್‌ಗಿಂತ ದೂರ ಇದ್ದರೆ ಅದನ್ನು ವಿದ್ಯುತ್ತೀಕರಣದ ವ್ಯಾಪ್ತಿಗೆ ತರದೇ ಇರತಕ್ಕ ರೂಲ್ ಮಾಡಿಕೊಂಡಿದ್ದಾರೆ. ಒಂದು ಮೀಟರ್ ಜಾಸ್ತಿ ಇದ್ದರೂ ಒಂದೂವರೆ ಕಿಲೋಮೀಟರ್‌ಗಿಂತ ದೂರ ಇದೆ ಎಂದು ಬಿಟ್ಟರತಕ್ಕ ಹರಿಜನ ಕೇರಿಗಳು ನುತ್ತು ಲಂಬಾಣಿ ತಾಂಡಗಳಿವೆ. ಈ ನಿಯಮವನ್ನು ಲಂಬಾಣಿ ತಾಂಡ ನುತ್ತು ಹರಿಜನ ಕಾಲೋನಿಗಳ ವಿಷಯದಲ್ಲಿ ಸಡಿಲಗೊಳಿಸದೇ ಇದ್ದರೆ ಕೆಲಸವಾಗುವುದಿಲ್ಲ. ಆದ್ದರಿಂದಲೇ ಇದಕ್ಕೆ ವಿಶೇಷ ಯೋಜನೆ ಹಾಕಿಕೊಂಡಿದ್ದೇವೆ. ಇದಕ್ಕೆ ಹೆಚ್ಚಿನ ಹಣ ತೊಡಗಿಸಬೇಕಾಗುತ್ತದೆ. ಕೆಲವು ಅನಿವಾರ್ಯ ಕಾರಣಗಳಿಂದ ಮನಸ್ಸಿನಲ್ಲಿ ಎಷ್ಟು ವೇಗವಾಗಿ ಕೆಲಸಮಾಡಬೇಕೆಂಬ ಇಚ್ಛೆ ಇದೆಯೋ ಅಷ್ಟು ವೇಗವಾಗಿ ಕೆಲಸ ಮಾಡಿವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಸಿಮೆಂಟ್ ಇಲ್ಲ. ಸಿಮೆಂಟ್ ಇಲ್ಲದೇ ಇರುವುದರಿಂದ ಪೋಲ್‌ಗಳು ಸಿಗುತ್ತಿಲ್ಲ. ಅದಿಲ್ಲದೇ ಇರುವುದರಿಂದ ಕೆಲಸ ಆಗಿಲ್ಲ. ಸಿಮೆಂಟ್ ಉತ್ಪಾದನೆ ಏತಕ್ಕೆ ಸರಿಯಾಗಿಲ್ಲ ಎಂದರೆ ವಿದ್ಯುಚ್ಛಕ್ತಿ ಉತ್ಪಾದನೆ ಸರಿಯಾಗಿಲ್ಲ --ಹೀಗೆ ಒಂದಕ್ಕೊಂದು ವಿಷವರ್ತುಲದಲ್ಲಿದ್ದೇವೆ. ಮಾನ್ಯ ಸದಸ್ಯರು ನಮ್ಮ ಊರಿನ ಮೇಲೆ ವೈರ್ ಹೋಗಿದೆ ಕರೆಂಟ್ ಏತಕ್ಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಹಾಗೆ ಕರೆಂಟ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ವೈರ್‌ನಿಂದ ನೇರವಾಗಿ ಕರೆಂಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ವೋಲ್ಟೇಜ್ ಎಷ್ಟಿದೆ ಎಂಬುದನ್ನು ತಿಳಿದುಕೊಂಡು ಸರಿಯಾದ ಉಪಕರಣ ಹಾಕಿ ತೆಗೆದುಕೊಂಡರೆ ಕರೆಂಟ್ ಬರುತ್ತದೆಯೇ ಹೊರತು ಸುಮ್ಮನೆ ಹಿಡಿದರೆ ಅಪಾಯವಾಗುತ್ತದೆ

ಶ್ರೀ ಧರ್ಮಸಿಂಗ್.—ಇದೆಲ್ಲಾ ಪಟೇಲ್ ಅವರಿಗೆ ಈಗ ಅರ್ಥವಾಗುತ್ತಿದೆ

ಶ್ರೀ ಎಸ್. ಆರ್. ಬೊಮ್ಮಾಯಿ.--ಯಾವರೀತಿ ಪ್ರಶ್ನೆ ಕೇಳಬೇಕೆಂಬುದು ನಿಮಗೂ ಈಗ ಗೊತ್ತಾಗುತ್ತಿದೆ.

ಉಪಾಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ ಮುಗಿಸಿ.

ಶ್ರೀ ಜೆ. ಎಚ್. ಪಟೇಲ್.--ಮಾನ್ಯ ಸದಸ್ಯರೊಬ್ಬರು ಲಂಬಾಣಿಗಳ ಮೇಲೆ ನನಗೆ ಅತೀವವಾದ ಪ್ರೀತಿ ಇದೆ ಎಂದು ಹೇಳಿದರು. ಅದು ನಿಜ.

ಶ್ರೀ ಭೀಮಣ್ಣ ಖಂಡ್ರೆ.--ಒಂದೇ ಒಂದು ವಿವರಣೆ ಕೇಳುತ್ತೇನೆ.

ಉಪಾಧ್ಯಕ್ಷರು.-- ಸಾಕು ಸಾಕು.

ಶ್ರೀ ಭೀಮಣ್ಣ ಖಂಡ್ರೆ.---ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ. 110 ಲಂಬಾಣಿ ತಾಂಡಗಳಿಗೆ ಯಾವಾಗ ವಿದ್ಯುತ್ತೀಕರಣ ಮಾಡುತ್ತೀರಿ ಎಂದು ಕೇಳಿದ್ದೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

ಶ್ರೀ ಜೆ. ಎಚ್. ಪಟೇಲ್.--ಈ ರಾಜ್ಯದಲ್ಲಿ 1990ಕ್ಕೆ ಎಲ್ಲ ಗ್ರಾಮಗಳಿಗೂ ವಿದ್ಯುತ್ತೀಕರಣ ಆಗಬೇಕು ಎಂಬ ಯೋಜನೆ ಇದೆ. ಅದಕ್ಕಿಂತ ಮುಂಚೆ ಅಂದರೆ 1988-89 ರೊಳಗಾಗಿ ಆ ಕೆಲಸ ಮಾಡಬೇಕೆಂಬುದು ಈ ಸರ್ಕಾರದ ಉದ್ದೇಶ.

ಶ್ರೀ ಎಂ. ಮಹದೇವ್.—ಅದಷ್ಟು ಜಾಗ್ರತೆ ವಿದ್ಯುತ್ತೀಕರಣ ಕೆಲಸ ಮುಗಿಸುತ್ತೇವೆಂದು ಹೇಳಿದ್ದಾರೆ ಬಹಳ ಸಂತೋಷದ ವಿಷಯ. ಒಂದೊಂದು ತಾಂಡಗಳಿಗೂ ಮೂರು ನಾಲ್ಕು ಪೋಲ್ಸ್ ಕೊಟ್ಟರೆ ಲೈಟ್ ಸಿಗುತ್ತದೆ, ಹೆಚ್ಚು ವೆಚ್ಚ ಬರುವುದಿಲ್ಲ. 5 ಕಂಬ ಎಲ್ಲಿ ಬೀಳುತ್ತದೆ ಅಲ್ಲಿ ವಿಶೇಷವಾಗಿ ಕನೆಕ್ಷನ್ ಕೊಡುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್ —ಈಗಾಗಲೇ ನಾನು ಹೇಳಿದ್ದೇನೆ. ಅತ್ಯಲ್ಪ ಶ್ರಮದಿಂದ ಕೆಲಸವಾಗುತ್ತದೆಂಬುದು ನಮ್ಮ ಗಮನಕ್ಕೆ ಬಂದರೆ ಸಣ್ಣ ಪುಟ್ಟ ತೊಡಕುಗಳಿಂದ ಕೆಲಸ ನಿಲ್ಲಿಸುವುದಿಲ್ಲ ಎಂದು.

ಶ್ರೀ ಎಂ. ಮಹದೇವ್.—ಸರಿಯಾಗಿ ಉತ್ತರ ಕೊಡದೆ ನಮ್ಮನ್ನು ಕಡೆಗಣಿಸುತ್ತಿದ್ದಾರೆ. ರೆವಿನ್ಯೂ ಆದಾಯವನ್ನು ಮನದಲ್ಲಿಟ್ಟುಕೊಂಡರೆ ಗುಡ್ಡಗಾಡು ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ನಿಯಮವನ್ನು ಸಡಿಲ ಮಾಡಬೇಕು.

ಉಪಾಧ್ಯಕ್ಷರು.—ರೆವಿನ್ಯೂ ಆದಾಯ ಮನ್ನಾ ಮಾಡುವ ಬಗ್ಗೆ ಕೇಳಿದ್ದಾರೆ.

ಶ್ರೀ ಜೆ. ಎಚ್. ಪಟೀಲ್.—ಗುಲ್ಬರ್ಗಾದು ಪ್ರದೇಶ ಮತ್ತು ಬಯಲು ಸೀಮೆಗೆ ಬೇರೆ ಬೇರೆ ಕ್ರಮ ಇದೆ. ಆದರೆ ನಾನು ಈಗಾಗಲೇ ಹೇಳಿದಹಾಗೆ ಹರಿಜನ ಕಾಲೊನಿಗಳಿಗೆ, ಲಂಬಾಣಿ ತಾಂಡಗಳಿಗೆ, ಪಡ್ಡರ ಹಟ್ಟಿಗಳಿಗೆ ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಸವಲತ್ತುಗಳನ್ನು ಕೊಡುತ್ತೇವೆ. ಏನಾದರೂ ಅವರಿಗೆ ಸವಲತ್ತು ಕೊಡುವಾಗ ನಿಯಮ ಅಡ್ಡಿ ಬಂದರೆ ಅದನ್ನು ಬದಿಗೊತ್ತಿ ಸವಲತ್ತುಗಳನ್ನು ಕೊಡುತ್ತೇವೆ. ಎಲ್ಲರಿಗೂ ಈ ನಿಯಮವನ್ನು ತೆಗೆಯುವುದಕ್ಕಾಗುವುದಿಲ್ಲ.

ಬೀದರ್ ನಗರಕ್ಕೆ ಕುಡಿಯುವ ನೀರಿನ ಯೋಜನ ಬಗ್ಗೆ

149 ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) ಬೀದರ್ ನಗರಕ್ಕೆ ರೂ. 8ಕೋಟಿ ಅಂದಾಜು ವೆಚ್ಚದ ಯಾವುದಾದರೂ ಕುಡಿಯುವ ನೀರಿನ ಯೋಜನೆಯು ಸರ್ಕಾರದ ಮುಂದೆ ಇದೆಯೇ ;

ಆ) ಹಾಗಿದ್ದ ಪಕ್ಷದಲ್ಲಿ ಅದನ್ನು ಯಾವಾಗ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ವಸತಿ ಶಾಖೆ ಸಚಿವರು)—(ಅ) ಇಲ್ಲ. ಆದರೆ ರೂ. 14.10 ಲಕ್ಷ ರೂಪಾಯಿಗಳ ಯೋಜನೆಗೆ 20-1-83 ರಲ್ಲಿ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭವಾಗಿದೆ. ಜೊತೆಗೆ ದಿನಂ ಪ್ರತಿ 6 ದಶಲಕ್ಷ ಗ್ಯಾಲನ್ ನೀರು ಅವಶ್ಯಕತೆಗಾಗಿ ಯೋಜನೆ ತಯಾರಾಗುತ್ತಿದೆ.

ಆ) ಈ ಸದಕ್ಕೆ ಸರ್ವೆ ನಡೆಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಬೀದರ್ ನಗರಕ್ಕೆ ಕುಡಿಯುವ ನೀರಿನ ಯೋಜನೆ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದಾರೆ. ಮುಂದೆ ಯಾವುದಾದರೂ ಕ್ರಮ ತೆಗೆದುಕೊಳ್ಳುವ ಯೋಚನೆ ಇದೆಯೇ ?

ಶ್ರೀ ಎಂ. ಚಂದ್ರಶೇಖರ್.—ನಾನು ಉತ್ತರದಲ್ಲಿ ತಿಳಿಸಿರುವಂತೆ ದಿನಂಪ್ರತಿ 6 ದಶಲಕ್ಷ ಗ್ಯಾಲನ್ ನೀರಿನ ಅವಶ್ಯಕತೆಗಾಗಿ ಲಕ್ಷ ಎಸ್ಟಿಮೇಟಿಗಾಗಿ ಸರ್ವೆ ಆಗಬೇಕಾಗಿದೆ. ಸರ್ವೆ ಆದಮೇಲೆ ಮುನಿಸಿಪಾಲಿಟಿ ವತಿಯಿಂದ, ಸರ್ಕಾರದ ವತಿಯಿಂದ ಮತ್ತು ವಿನೂ ಇಲಾಖೆ ವತಿಯಿಂದ ಎಷ್ಟು ಹಣ ಬರುತ್ತದೆಂಬುದನ್ನು ನೋಡಿಕೊಂಡು ಕಾಮಗಾರಿ ಪ್ರಾರಂಭ ಮಾಡುತ್ತೇವೆ. ಸರ್ವೆ ಆದಮೇಲೆ ಮಂಜೂರಾತಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ

ಶ್ರೀ ಕೆ. ಚನ್ನಬಸವನಗೌಡ.—ಮಾನ್ಯ ಉಪಾಧ್ಯಕ್ಷರೆ 158 ನೇ ಪ್ರಶ್ನೆಯೂ ಇದೇ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಎರಡೂ ಪ್ರಶ್ನೆಗಳನ್ನು ಒಂದೇ ಸಲ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು.—ಕೆಲವು ಮಾಹಿತಿಗಳು ಬರಬೇಕಾಗಿರುವುದರಿಂದ 158ನೇ ಪ್ರಶ್ನೆಯನ್ನು ಕ್ಯಾರಿ ಓವರ್ ಮಾಡಲಾಗಿದೆ.

ಶ್ರೀ ಸಿ. ಬೆ ರೇಗೌಡ.—ಮಾನ್ಯ ಉಪಾಧ್ಯಕ್ಷರೆ, 151 ನೇ ಪ್ರಶ್ನೆಯನ್ನು ತಾವೇ ಕೇಳಿ. ಅದು ಬಹಳ ಮುಖ್ಯವಾದ ಪ್ರಶ್ನೆ. ತಮಗೆ ಕೇಳುವುದಕ್ಕೆ ಅಧಿಕಾರ ಇದೆ.

ಉಪಾಧ್ಯಕ್ಷರು.—ತಮಗೆ ಆಥರೈಸ್ ಮಾಡಿದ್ದಾರಾ ? ಮಾನ್ಯ ತಿಮ್ಮಪ್ಪ ಹೆಗಡೆಯವರಿದ್ದಾರೆ. ನೀವು ಏತಕ್ಕೆ ಹೇಳುತ್ತಿದ್ದೀರಿ ?

ಶಾನುಭೋಗರ ಮತ್ತು ಪಟೇಲರುಗಳಿಗೆ ವಿಶ್ರಾಂತಿ ವೇತನ ಕೊಡುವ ಬಗ್ಗೆ

150 ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ. (ಸಾಗರ್)— ಮಾನ್ಯ ಕಂದಾಯಮಂತ್ರಿಗಳು ಈ ಕೆಳಗಿನಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) 1961 ರಲ್ಲಿ ಗ್ರಾಮಾಧಿಕಾರಿಗಳ ಸೇವೆಯನ್ನು ರದ್ದು ಮಾಡಿದ ಶಾಸನ ಜಾರಿಗೆ ಬಂದಿದ್ದರೂ ರಾಜ್ಯದಲ್ಲಿ 1970 ರವರೆಗೂ ಶಾನುಭೋಗರು ಮತ್ತು ಪಟೇಲರು ಸೇವೆನೀಡಿರುವುದು ನಿಜವೇ ;

ಆ) ಈ ಅವಧಿಗೆ ವೇತನ ಅಥವಾ ಸಂಬಳ ಎಲ್ಲರಿಗೂ ಪಾವತಿಯಾಗಿದೆಯೆ ;

ಇ) ಹಾಗಿದ್ದಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಒಂದೇ ಕ್ರಮ ಅನುಸರಿಸಲಾಗಿದೆಯೇ ;

ಈ) ಇವರುಗಳಿಗೆ ಬವಣೆಭತ್ಯ, ಪರಿಹಾರ, ಪೆನಷನ್ ನಗೈರೆ ಕೊಡುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಉ) ಸದರಿ ಕೆಲಸಗಳಲ್ಲಿ ಕೆಲವು ಕಡೆ ಗುಮಾಸ್ತೆಯಾಗಿ ಮತ್ತು ಕೆಲವೆಡೆ ತಾತ್ಕಾಲಿಕ ಮಾಡಿರುವವರ ಬಗ್ಗೆ ಸರಕಾರದವರು ಕೊಡಲಿರುವ ಸೌಲಭ್ಯಗಳೇನು ?